ರಾಜ್ಯದಲ್ಲಿ ಆಶ್ರಯ ಮನೆಗಳಿಗೆ ಹಣ.

2033(2219)

ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಹಾಗೂ ನಗರ ಪ್ರದೇಶಗಳ ಆಶ್ರಯ ಫಲಾನುಭವಿಗಳಿಗೆ ನೀಡಲಾಗುತ್ತಿರುವ ಹಣವನ್ನು ಏಕ ರೀತಿಯಲ್ಲಿ ಅನುಷ್ಠಾನಕ್ಕೆ ತರಲು ಸರ್ಕಾರ ಬದ್ಧವಾಗಿದೆಯೆ; ವಿವರ ನೀಡುವುದು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು):

ಅ. ಇಲ್ಲ.

ಶಿವಮೊಗ್ಗ ನಗರದ ಪರಿಮಿತಿಯಿಂದ ಬಗರ್ ಹುಕುಂ ಸಕ್ರಮೀಕರಣ.

2034(2238)

ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರದ ಪರಿಮಿತಿಯಿಂದ ಬಗರ್ ಹುಕುಂ ಜಮೀನು ಸಕ್ರಮೀಕರಣಕ್ಕೆ ಇರುವ ಮಿತಿಯನ್ನು 2 ಕಿ.ಮೀ. ಇಳಿಸಲು ಸರ್ಕಾರ ಕ್ರಮ ಕೈಗೊಂಡಿದೆಯೆ? ವಿವರ ನೀಡುವುದು.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಇಲ್ಲ, ನಗರಗಳ ಬೆಳವಣಿಗೆ, ಕೈಗಾರಿಕೀಕರಣ, ವಾಸದ ನಿವೇಶನದ ಕೋರಿಕೆ ಇವುಗಳಿಗಾಗಿ ಜಮೀನಿನ ಅವಶ್ಯಕತೆ ಇದೆ. ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94(ಎ)ನಲ್ಲಿ ಉಪ ಕಲಂ 4ರಲ್ಲಿನ ಪರಂತುಕದ ಅನ್ವಯ ಶಿವಮೊಗ್ಗ ನಗರಪಾಲಿಕೆ ಮಿತಿಯಿಂದ 5 ಕಿ.ಮೀ. ಅಂತರದ ಜಮೀನಿನಲ್ಲಿನ ಅನಧಿಕೃತ ಸಾಗುವಳಿ ಸಕ್ರಮೀಕರಣವನ್ನು ನಿಷೇಧಿಸಿದೆ.

ಶಿವಮೊಗ್ಗ ಎ.ಪಿ.ಎಂ.ಸಿ. ಹಣವನ್ನು ಅಭಿವೃದ್ಧಿಗೆ ವಿನಿಯೋಗಿಸುವುದು.